doc-405
T-P-2

(1)

R No KRNN 12 ಶ್ರೀ 23-11-1974

ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

in ★ ★ ★ ★ ★
58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
- For Influential Publicity -

ಸ್ಥಾಪಕರು: ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [8 ಪು.

ರಾಜಗಳು ಸಾಲಾ ಮಾಡಲು ನಿರಾಕರಣೆ

ಚಿನ್ನ ಹೊದಿರುವ ಪರಿಮಿತಿ

ನವದೆಹಲಿ— ಜನರು ತಾವು ಹೊಂದಿರಬಹುದಾದ ಚಿನ್ನದ ಪರಿಮಿತಿ ಬಗ್ಗೆ ಸರಕಾರ ಪರ್ಯಾಲೋಚಿಸುತ್ತಿರುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

— —

ವಿನಿಮಯ ಪುನರ್ಪರಿಶೀಲನೆ

ನವದೆಹಲಿ— ಭಾರತ ಸರಕಾರವು ರಷ್ಯಾ ಸರಕಾರದೊಡನೆ ರೂಪಾಯಿ ಮತ್ತು ರೂಬಲುಗಳ ವಿನಿಮಯ ದರವನ್ನು ಪುನರ್ಪರಿಶೀಲನೆ ಬಗ್ಗೆ ಚರ್ಚಿಸುತ್ತಿರುವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ವುಡ್‌ಲಾಂಡ್ 22 11 74 ರಿಂದ

ಅಮೋಘ 3 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ — ಆರ್. ಡಿ. ಬರ್ಮನ್ ನಿರ್ದೇಶನ — ಶಕ್ತಿ ಸಾಮಂತ್

ದಿನ ೫ ಪ್ರದರ್ಶನಗಳು

ಅ ಪೆ ರಾ 22 11 74 ರಿಂದ

ಆನೋಕ ದಾನ್

ಅನಿಲ್ ದಾವನ್ — ಅರ್ಚನ ಇವರ ಅಭಿನಯದಿಂದ ಕೂಡಿದ
ಅಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ಸಂಗೀತ — ಸಲೀಲ್ ಚೌಧುರಿ

ದಿನ 3 ಪ್ರದರ್ಶನಗಳು

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja Puram Mysore

ಜಯಪ್ರಕಾಶರ ಟೀಕೆ

ನವದೆಹಲಿ— ಪ್ರಧಾನಿಯವರು ಅಥವಾ ಯಾರಾದರೂ ಸರಕಾರಿ ಪ್ರತಿನಿಧಿಗಳೊಡನೆ ಸಂಧಾನದಲ್ಲಿ ತಾವು ತಮ್ಮ 9 ಪಾಯಿಂಟುಗಳನ್ನು ಒತ್ತಾಯ ಮಾಡುವುದಾಗಿ ಶ್ರೀ ಜಯಪ್ರಕಾಶ ನಾರಾಯಣರು ಹೇಳಿದರು — ವಿರೋಧ ನಾಯಕರುಗಳೊಡನೆ ಸೋಮವಾರ ಚರ್ಚಿಸುವ ವಿಷಯಗಳ ಬಗ್ಗೆ ಸೋಷಲಿಸ್ಟ್ ನಾಯಕರೊಡನೆ ವಿಚಾರ ವಿನಿಮಯವನ್ನು ಶುಕ್ರವಾರ ನಡೆಸಿದರು— ಜಯಪ್ರಕಾಶರು ದೆಹಲಿಯಲ್ಲಿ ಸೋಮವಾರ ಕರೆದಿರುವ ಸರ್ವೋದಯದ ಸಮ್ಮೇಳನದಲ್ಲಿ ಡಿಎಂಕೆ ಭಾಗವಹಿಸುವದೆಂದು ಅದರ ಅಧ್ಯಕ್ಷರೂ ಮತ್ತು ತಮಿಳುನಾಡು ಮುಖ್ಯಮಂತ್ರಿಗಳೂ ಆದ ಶ್ರೀ ಕರುಣಾನಿಧಿಯವರು ಮದರಾಸಿನಲ್ಲಿ ಹೇಳಿದರು — ಪಾಟ್ನಾ ಹೈಕೋರ್ಟು ಆಂತರ ರಕ್ಷಣಾ ಶಾಸನ ಪ್ರಕಾರ ಬಂಧಿಸಲ್ಪಟ್ಟಿದ್ದ ಉನ್ನತ ಎಸ್ಸೆಸ್ಪಿ ನಾಯಕ ಶ್ರೀ ಶಾಪೂರಿ ಥಾಕೂರರ ಬಿಡುಗಡೆಗೆ ಆಜ್ಞೆ ಮಾಡಿತು.

★

ಸೋಷಲಿಸ್ಟ್ ನಾಯಕರ ಕಟು ಟೀಕೆ

ಹುಬ್ಬಳ್ಳಿ— ಸೋಷಲಿಸ್ಟ್ ನಾಯಕ ಜಾರ್ಜ್ ಫರ್ನಾಂಡಿಸ್‌ರು ಪಾರ್ಟಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಪ್ರಧಾನಿ ಇಂದಿರಾರವರ ಫಾಸಿಸ್ಟು ನೀತಿಯನ್ನು ಕಟುವಾಗಿ ಟೀಕಿಸಿ, ಸರಕಾರದ ಎಲ್ಲ ಮಟ್ಟದಲ್ಲೂ ಭ್ರಷ್ಟಾಚಾರಕ್ಕಾಗಿ ನಿಂದಿಸಿದರು

★

ಜೆ ಪಿ ಚಳವಳಿಗೆ ಬೆಂಬಲ

ಹುಬ್ಬಳ್ಳಿ— ಸರ್ವೋದಯ ನಾಯಕ ಜಯಪ್ರಕಾಶರ ಚಳುವಳಿಯು ದೇಶಾದ್ಯಂತ ಹರಡುವ ಬಗ್ಗೆ ತಾವು ಸಾಧ್ಯವಾದುದನ್ನೆಲ್ಲಾ ಮಾಡುವೆವೆಂದಾಗಿ ಸೋಷಲಿಸ್ಟು ನಾಯಕ ಜಾರ್ಜ್ ಫರ್ನಾಂಡೆಸ್ ಪತ್ರಿಕೆಯವರಿಗೆ ತಿಳಿಸಿದರು — ಜೆ ಪಿ ಚಳುವಳಿಗೆ ಬೆಂಬಲ ನೀಡಲು ದೇಶಾದ್ಯಂತ ಕಾರ್ಮಿಕರಿಗೆ ಮನವಿ ಮಾಡಿರುವರು

ರಾಜ್ಯಗಳು ಸಾಲವೆತ್ತುವ ಬಗ್ಗೆ ತಡೆ

ನವದೆಹಲಿ— ರಾಜ್ಯಗಳು ಮಾರುಕಟ್ಟೆಗಳಲ್ಲಿ ಹೊಸ ಸಾಲ ಎತ್ತುವದಕ್ಕೆ ಅಪ್ಪಣೆ ತಿರಸ್ಕರಿಸುವದಾಗಿ ಲೋಕ ಸಭೆಯಲ್ಲಿ ತಿಳಿಸಲಾಯಿತು.

ಕೋರ್ಟಿಗೆ ಆಶ್ಚರ್ಯ !

ನವದೆಹಲಿ— ಆಂತರ ರಕ್ಷಣಾ ಕಾನೂನು ಪ್ರಕಾರ ಬಂಧಿಸಲ್ಪಟ್ಟಿದ್ದ ಹರ್ಬನ್ಸ್ ಲಾಲ್ ಮತ್ತು ದಯಾಶಂಕರರ ಬಿಡುಗಡೆಗೆ ಹೈಕೋರ್ಟು ಆಜ್ಞೆ ಮಾಡಿತು —

ಸರಕಾರಿ ವಕೀಲರು ಶ್ರೀಮತಿ ಶ್ಯಾಮಲಾ ಪಪ್ಪುರವರು, ಸುಪ್ರೀಂ ಕೋರ್ಟಿಗೆ ಅಪೀಲು ಮಾಡಲು ಅನುಮತಿಗೆ ಅರ್ಜಿ ಕೊಟ್ಟಾಗ ಜಡ್ಜರು ಆಶ್ಚರ್ಯಗೊಂಡು ನಾವು ಇವರನ್ನು ಬಿಡುಗಡೆ ಮಾಡುವೆವೆಂಬ ವಿಷಯ ನಿಮಗೆ ಹೇಗೆ ಗೊತ್ತಾಯಿತು ಎಂದು ಅರ್ಜಿ ಬಗ್ಗೆ ತೀವ್ರ ಲಕ್ಷ್ಯಕೊಟ್ಟು ಸೋಮವಾರ ವಿಚಾರಣೆಗಿಟ್ಟರು.

ವಿಲಿಯಗಟ್ಟಿ ಸುಲಿಗೆ ಹಣ

ಇಟಲಿಯ ಪ್ರಖ್ಯಾತ ಕೈಗಾರಿಕೋದ್ಯಮಿಯ ಮಗ 22 ವರ್ಷದ ಬೆಪೆ ಯುಕ್ತಿಯನ್ನು ಅಪಹರಿಸಿದ್ದವರಿಗೆ ಅವನ ಬಿಡುಗಡೆಗಾಗಿ 3 5 ಮಿಲಿಯದಿಂದ 5 ಮಿಲಿಯದ ತರಿಗೆ ಪಾವತಿ ಮಾಡಲಾಯಿತೆಂದು ಪೋಲೀಸರು ಹೇಳಿದರು.

ಕಳ್ಳ ಸಾಗಾಣಿಕೆಗಾರರು ಗುಂಡಿಗೆ ಬಲಿ

ಬಂಗ್ಲಾದೇಶದ ಸೈನ್ಯವು ಪ್ರಸ್ತುತ ಕಳ್ಳ ಸಾಗಾಣಿಕೆ ವಿರುದ್ಧ ಕ್ರಮದಲ್ಲಿ ಗಡಿಗಳಲ್ಲಿ ಹತ್ತು ಮಂದಿಯನ್ನು ಗುಂಡು ಹೊಡೆದು ಕೊಂದರೆಂದು ವರದಿಯಾಗಿದೆ.

ರಿಸರ್ವ್ ಬ್ಯಾಂಕು ಸೂಚನೆ ಉಲ್ಲಂಘನೆ

ನವದೆಹಲಿ— ಪ್ರಧಾನಿಯವರ ಮಗ ಶ್ರೀ ಸಂಜಯ ಗಾಂಧಿಯವರ ಮಾರುತಿ ಲಿಮಿಟೆಡ್ ರಿಜರ್ವ್ ಬ್ಯಾಂಕು ಸೂಚನೆ ಉಲ್ಲಂಘಿಸಿದ್ದರೂ ಅದರ ಮೇಲೆ ಕ್ರಮ ಕೈಗೊಂಡಿಲ್ಲವೆಂದು ಸೋಷಲಿಸ್ಟು ನಾಯಕ ಮಧು ಲಿಮಯೆ ಆಪಾದಿಸಿರುವರು.

(2)

ನ ಗ ರಾ ಭಿ ವೃ ದ್ಧಿ ವಿ ಶ್ವ ಸ್ಥ ಮಂ ಡ ಳಿ

ಝೂ ಸ್ಪಿ ಲಕ್ಷ್ಮಿ ಬಾ ಯಿ ರಸ್ತೆ, ಮೈ ಸೂ ರು

ನಂ. ಬಿ. 1 . 30 . 74 – 75 ತಾ : 16-11-1974

ಪ್ರ ಕ ಟ ಣೆ

ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು ಕೆಳಕಂಡ 158 ನಿವೇಶನಗಳು ಗಾಯತ್ರಿಪುರಂ ಎರಡನೇ ಹಂತದ ಬಡಾವಣೆ ಮತ್ತು 96 ನಿವೇಶನಗಳು ಬೃಂಡಾವನ ಎಕ್ಸ್‌ಟೆನ್‌ಷನ್, ಮೈಸೂರು ಇಲ್ಲಿ ದೊರೆಯುವುದನ್ನು ಪ್ರಕಟಿಸಲು ಹರ್ಷಿಸುತ್ತದೆ. ನಿವೇಶನಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಗಾ ಯಿ ತ್ರಿ ಪು ರ ಂ ಎ ರ ಡ ನೇ ಹಂ ತ 158 ನಿ ವೇ ಶ ನ ಗ ಳು

ಕ್ರಮ ಸಂಖ್ಯೆ	ಇಂಟರ್ ವೀಡಿಯೇಟ್ ನಿವೇಶನಗಳ ಸಂಖ್ಯೆ	ಅಳತೆ (ಅಂದಾಜು) ಅಡಿಗಳು	ಸೈಟುಗಳ ವಿಸ್ತೀರ್ಣ	ಚ. ಗಜ ಒಂದಕ್ಕೆ ಬೆಲೆ	ಅರ್ಜಿಯೊಡನೆ ಸಲ್ಲಿಸಬೇಕಾದ ಮುಂಗಡ ಹಣ (ಅರ್ನೆಸ್ಟ್‌ಮನಿ)	
					ಶೇ 12½ ರಂತೆ	§ ಶೇ 3 ರಂತೆ
				ರೂ	ರೂ	ರೂ
1	17	50'x80'	445	30	1,660	400
2	54	40'x60'	266	30	1,000	240
3	31	40'x50'	223	27	750	180
4	2	35'x50'	195	23	560	135
	8	35'x40'	156		450	108
5	46	30'x40'	133.1/3	20	330	80
ಒಟ್ಟು	158					

ಬೃಂ ಡಾ ವ ನ ಎ ಕ್ಸ್‌ ಟಿ ನ್ ಷ ನ್ 96 ನಿ ವೇ ಶ ನ ಗ ಳು

1	13	40'x60'	266	32	1,067	260
2	14	50'x40'	222	32	890	210
3	57	40'x40'	166	28	575	138
4	12	30'x40'	133.1/3	26	433	105
ಒಟ್ಟು	96					

ವಿಶೇಷ ಸೂಚನೆ :—

1 ಮೈಸೂರು ನಗರಾಭಿವೃದ್ಧಿ 1972 ರ (ನಿವೇಶನಗಳ ಹಂಚಿಕೆ) ನಿಯಮದ ಅನುಸಾರ ಮೇಲ್ಕಂಡ ನಿವೇಶನಗಳಿಗಾಗಿ ಸಾರ್ವಜನಿಕರಿಂದ ಅರ್ಜಿಗಳನ್ನು ಕೋರಿದೆ.

2 ಅರ್ನೆಸ್ಟ್ ಹಣ ಠೇವಣಿಯನ್ನು " ಛೇರ್ಮನ್, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್, ಮೈಸೂರು " ಇವರಿಗೆ ಪಾವತಿಯಾಗುವಂತೆ ಮೈಸೂರಿನಲ್ಲಿನ ಯಾವುದೇ ಷೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಲ್ಲಿಸತಕ್ಕದ್ದು.

3 ಪರಿಶಿಷ್ಟ ಜಾತಿ–ವರ್ಗ, ಅಲೆಮಾರಿ ಮತ್ತು ಅರೆ ಅಲೆಮಾರಿ ಮತ್ತು ಅನುಸೂಚಿತ ಜನಾಂಗದವರ ಬಗ್ಗೆ ಅರ್ನೆಸ್ಟ್ ಹಣ ಠೇವಣಿಯಾಗಿ ನಿವೇಶನದ ಮೌಲ್ಯದ § ಕೇಕಡ 3 ರಷ್ಟನ್ನು ಅರ್ಜಿಯ ಜೊತೆಯಲ್ಲಿ ಸಲ್ಲಿಸತಕ್ಕದ್ದು. ಹಾಗೂ ಅವರು ತಹಸೀಲ್ದಾರ್ ಅಥವಾ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್‌ರವರಿಂದ ಪಡೆದ ಜಾತಿಯ ಬಗ್ಗೆ ಸರ್ಟಿಫಿಕೇಟು ಸಲ್ಲಿಸಬೇಕು.

4 ಲೇ ಔಟು ನಕ್ಷೆಯ ವೀಕ್ಷಣೆ ಹಾಗೂ ಅರ್ಜಿ ಪತ್ರಗಳನ್ನು ಪಡೆಯುವ ಸಲುವಾಗಿ (ಪ್ರತಿಯೊಂದಕ್ಕೂ ರೂ. 2/– ಸಲ್ಲಿಸಬೇಕು) ಹಾಗೂ ಅನುಸರಿಸಬೇಕಾದ ಕ್ರಮಗಳನ್ನು ತಿಳಿಯಲು 20–11–74 ರಿಂದ ಕಛೇರಿ ವೇಳೆಯಲ್ಲಿ ಹೆಳಗ್ಗೆ 11 ರಿಂದ ಸಂಜೆ 4–30 ರ ವರೆಗೆ ಕಛೇರಿಗೆ ಬರಲು ನಿಮಗೆ ಸುಸ್ವಾಗತ. ಈ ಕಚೇರಿಯಲ್ಲಿ ಅರ್ಜಿ ಪತ್ರಗಳನ್ನು ಸ್ವೀಕರಿಸಲು ಕೊನೆಯ ತಾರೀಖು 20–12–1974 ಸಂಜೆ 4 ಗಂಟೆಯ ವರೆವಿಗೆ ಮಾತ್ರ.

5 ಸಾರ್ವಜನಿಕರು ನಗರಾಭಿವೃದ್ಧಿ ಸಮಿತಿಗೆ ತಾವು ಕೊಡತಕ್ಕ ಅರ್ಜಿಯಲ್ಲಿ ನಮೂದಿಸಿರುವ ಅರ್ಜಿ ನಂಬರನ್ನು ಗುರುತು ಹಾಕಿ ಇಟ್ಟುಕೊಳ್ಳತಕ್ಕದ್ದು. ಏಕೆಂದರೆ ಮುಂದೆ ಸೈಟು ಅಲಾಟ್ ಮಾಡಲ್ಪಡುವ ಅರ್ಜಿಯ ನಂಬರುಗಳನ್ನೂ ಮಾತ್ರ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

6 ಸೈಟು ಮಂಜೂರಾಗದೆ ಇರತಕ್ಕ ಅರ್ಜಿದಾರರು ತಮಗೆ ಕೊಟ್ಟಿರತಕ್ಕ ರೀಫಂಡ್ ಓಚರುಗಳನ್ನು ಚಲನ್ ಸಮೇತ ಹಾಜರ್ಪಡಿಸಿ ತಾವು ಕಟ್ಟಿರತಕ್ಕ ಠೇವಣಿಯ ಮೊಬಲಗನ್ನು ವಾಪಸ್ಸು ಪಡೆಯತಕ್ಕದ್ದು. ಠೇವಣಿ ಹಣವನ್ನು ಫಲಿತಾಂಶ ಪ್ರಕಟಿಸಿದ 2 ತಿಂಗಳ ನಂತರ ವಾಪಸ್ಸು ಮಾಡಲಾಗುತ್ತೆ.

ಸಹಿ/– ಬಿ. ಎನ್. ಕೆಂಗೇಗೌಡ,
ಅಧ್ಯಕ್ಷ, ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ, ಮೈಸೂರು

[ad-venture]

ಮದುವೆಗೆ ಮುಂಚೆ ಸಂಭೋಗ

ಅಮೇರಿಕಾದಲ್ಲಿ ಅನೇಕ ಯೌವನವತಿಯರು ವಿವಾಹ ಮುಂಚಿತ ಸಂಭೋಗ ಹೊಂದಿದ್ದರೂ, ಹೆಚ್ಚು ಮಂದಿ ಸಂತತಿ ಪ್ರತಿಬಂಧಕಕ್ಕೆ ಹೋಗುತ್ತಿಲ್ಲ ; ಅಮೇರಿಕದ 15 ರಿಂದ 19 ವರ್ಷದ ಹುಡುಗಿಯರಲ್ಲಿ ಶೇಕಡ 30 ಮಂದಿ ವಿವಾಹಕ್ಕೆ ಮುಂಚಿತವಾಗಿಯೇ ಪುರುಷಸುಖ ಅನುಭವಿಸಿರುವರು, ಎಂದು ಇಬ್ಬರು ಜರ್ನಾ ಹಾಪ್ಕಿನ್ಸ್‌ರ ಸಂಶೋಧಕರು ನಡೆಸಿದ ವ್ಯಾಸಂಗದಿಂದ ವ್ಯಕ್ತಪಟ್ಟಿದೆ.

★

ಟೆಲಿವಿಜನ್ನಿನಲ್ಲಿ ಮದುವೆ ಮಾರುಕಟ್ಟೆ

ಜರ್ಮನರು ತಮಗೆ ಬೇಕಾದ ಗಂಡ ಅಥವಾ ಹೆಂಡತಿಯನ್ನು ಟೆಲಿವಿಜನ್ನು ಮೂಲಕ ಆರಿಸಿಕೊಳ್ಳಬಹುದಾಗಿದೆ – ಇದಕ್ಕಾಗಿ ತಿಂಗಳಿಗೆ ಒಂದು ಸಾರಿ ಟೆಲಿವಿಜನ್ನಿನಲ್ಲಿ 50 ನಿಮಿಷಗಳ ಮದುವೆ ಮಾರುಕಟ್ಟೆ ಕಾರ್ಯಕ್ರಮ ಯೋಜಿಸಲಾಗಿದೆ.

★

ಹಳೇ ಗೋಡೆ ಗಡಿಯಾರಗಳು

ಪಶ್ಚಿಮ ಜರ್ಮನಿಯ ಸ್ಟಟ್‌ಗಾರ್ಟ್‌ನ ಮೂಜಿಯಂನಲ್ಲಿ 17 ನೇ ಶತಮಾನದ ತರಹಾವರಿ ವಿಚಿತ್ರವಾದ ಗೋಡೆ ಗಡಿಯಾರಗಳು ಶೇಖರಿಸಲಾಗಿದೆ.

●

ಖೋತಾ ಬಜೆಟ್

ವಾಷಿಂಗ್ಟ್— ಈ ವರ್ಷ ಅಮೇರಿಕಾ ಬಜೆಟ್ 8000 ದಿಂದ 10000 ದವರೆಗೆ ಖೋತಾವಿರುವದೆಂದು ಹೇಳಲಾಗಿದೆ.

★

ದಿವ್ಯವಾಣಿ

ಸತ್ಯವನ್ನು ಕಾಣುವವನು, ಅದರ ಪರರಾರು, ವಿರೋಧ ಯಾರು ಎಂಬುದನು ಕೇಳದೇ, ಅದನ್ನು ಘೋಷಿಸಬೇಕು

— ಹೆನ್ನಿ ಜಾರ್ಜ್

ಛತ್ರಿ
ರೇನ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್
A Firm known for
Genuine Good Business